ಕರ್ನಾಟಕ ಸರ್ಕಾರ
ವಾಣಿಜ್ಯ ತೆರಿಗೆ ಇಲಾಖೆ

28801243

ಸಂಖ್ಯೆ:ವಾತೆಜಂಆ(ಆ)/ವಿ.ಸ.ಸೇ.ತೆ.ಕ-5/ವಾಹನ/ಸಿಆರ್-16/2021-22

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರ ಕಛೇರಿ (ಆಡಳಿತ),
ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5,
ಕೊಠಡಿ ಸಂ.501, 'ಬಿ' ಬ್ಲಾಕ್, ವಿಟಿಕೆ-2, ರಾಜೇಂದ್ರನಗರ,
ಕೋರಮಂಗಲ, ಬೆಂಗಳೂರು-560047,
ದಿನಾಂಕ: 03-08-2021

Office of the Commissioner of Commercial Taxes, Bengaluru-9
686
3 AUG 2021
(e-governance)

## ಟೆಂಡರ್ ಅಧಿಸೂಚನೆ

**ವಿಷಯ :** ದಿನಾಂಕ: 01-09-2021 ರಿಂದ 31-08-2022ರ ಅವಧಿಯವರೆಗೆ ಈ ಕಛೇರಿಗೆ ಸಾಮಾನ್ಯ ಟೆಂಡರ್ ಪ್ರಕ್ರಿಯೆ ಮುಖೇನ 5 ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದುಕೊಳ್ಳುವ ಬಗ್ಗೆ.

**ಉಲ್ಲೇಖ :** **1)** ಸರ್ಕಾರದ ಆದೇಶ ಸಂ. ಸಿಆಸುಇ 96 ಶಿವಾನೀ 2012, ಬೆಂಗಳೂರು, ದಿನಾಂಕ: 23-08-2012.

**2)** ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಪತ್ರ ಸಂ.ವಿಹೆಚ್‌ಟಿ/ಸಿಆರ್-07/2018-19, ದಿನಾಂಕ: 19-07-2021.

**3)** ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರವರ ಪತ್ರ ಸಂ.ವಿಹೆಚ್‌ಟಿ/ಸಿಆರ್-07/2018-19, ದಿನಾಂಕ: 29-07-2021.

9-4

* * * * *

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ-5, ಬೆಂಗಳೂರು, ಈ ಕಛೇರಿಯ ಉಪಯೋಗಕ್ಕಾಗಿ 5 (ಐದು) ಖಾಸಗಿ ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಪಡೆಯಲು ಉಲ್ಲೇಖದಲ್ಲಿ ತಿಳಿಸಿರುವ ಮಾನ್ಯ ಆಯುಕ್ತರ ಪತ್ರದಲ್ಲಿ ಅನುಮತಿಸಿರುವುದರಿಂದ, ಮಾಲೀಕರೇ ಚಾಲಕರಾಗಿರುವವರಿಂದ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಆಸಕ್ತ ಒಬ್ಬ ವಾಹನ ಮಾಲೀಕ/ಚಾಲಕರು, ಒಂದು ವಾಹನ ಸೇವೆಗೆ ಮಾತ್ರ ಅರ್ಜಿಯನ್ನು ಸಲ್ಲಿಸುವುದು. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಶಿವಾನೀ 2012, ದಿ:23.08.2012 ರಲ್ಲಿ ತಿಳಿಸಿರುವ ನಿಯಮಗಳನ್ವಯ ಖಾಸಗಿ ವಾಹನಗಳ ಸೇವೆಯನ್ನು ಪಡೆಯಲಾಗುವುದು.

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 96 ಶಿವಾನೀ 2012, ಬೆಂಗಳೂರು, ದಿನಾಂಕ: 23.08.2012ರ ಅನ್ವಯ ವಾಹನಗಳ ಬಾಡಿಗೆ ತಿಂಗಳಿಗೆ ಮೊತ್ತ ರೂ.25,000-00 ನೀಡಲಾಗುವುದು.
2. ವಾಹನದ ಮಾದರಿಯು 2015 ಮತ್ತು ನಂತರದಾಗಿರತಕ್ಕದ್ದು, ಪ್ರತಿ ವಾಹನದ ಗುಣಮಟ್ಟವನ್ನು ಹಾಗೂ ಚಾಲನ ಕೌಶಲ್ಯವನ್ನು ಪರಿಶೀಲಿಸಿದ ನಂತರವೇ ವಾಹನಗಳನ್ನು ತೆಗೆದುಕೊಳ್ಳಲಾಗುದು.
3. ದಿನಾಂಕ: 01.10.2018 ರಿಂದ ಅನ್ವಯವಾಗುವಂತೆ ಈ ಹಿಂದೆ ಸತತವಾಗಿ 5 ವರ್ಷಗಳ ಕಾಲ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ ಸೇವೆ ಸಲ್ಲಿಸಿರುವ ಯಾವುದೇ ಮಾಲಿಕರೇ ಚಾಲಕರಾಗಿರುವ ಖಾಸಗಿ ವಾಹನಗಳ ಅರ್ಜಿಗಳನ್ನು ಪರಿಗಣಿಸುವುದಿಲ್ಲ.
4. ಗುತ್ತಿಗೆಯ ಆವಧಿ ದಿನಾಂಕ 01-09-2021 ರಿಂದ 31-08-2022 ರವರೆಗೆ

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ **17.08.2021 ಸಂಜೆ 5.00 ಘಂಟೆಯವರೆಗೆ.** ಆ ನಂತರ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ.

ಅರ್ಹಗೊಂಡ ಮಾಲೀಕರೇ ಚಾಲಕರಾಗಿರುವ ವಾಹನ ಮಾಲೀಕ/ಚಾಲಕರ ವಿವರವನ್ನು ಇಲಾಖೆಯ ಸೂಚನಾ ಫಲಕ ಹಾಗೂ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳು/ವಿವರಗಳು:**

| | |
|---|---|
| 1 | ಅರ್ಜಿದಾರರ ಹೆಸರು,ವಿಳಾಸ ಹಾಗೂ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು–2 |
| 2 | ವಿಳಾಸದ ದಾಖಲೆ (ಮತದಾರರ ಗುರುತಿನ ಚೀಟಿ/ರೇಷನ್ ಕಾರ್ಡ್/ಆಧಾರ್ ಕಾರ್ಡ್/ಪಾಸ್ ಪೋರ್ಟ್ ಅಥವಾ ಇತರೆ ಭಾವಚಿತ್ರ ಹೊಂದಿರುವ ಗುರುತಿನ ಚೀಟಿ ಹಾಗೂ ಖಾಯಂ ವಿಳಾಸದ ದಾಖಲೆ, ಬ್ಯಾಂಕ್ ಖಾತೆಯ ವಿವರಗಳು/ಚೆಕ್ಕಿನ ಪ್ರತಿ. |
| 3 | ವಾಹನದ ನೊಂದಣಿ ಪುಸ್ತಕದ ಪ್ರತಿ – ಪ್ರಮಾಣ ಪತ್ರ |
| 4 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನದ ವಿಮಾ ಪಾಲಿಸಿಯ ಪ್ರತಿ |
| 5 | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ ವಾಹನ ಚಾಲನಾ ಪರವಾನಗಿ ಪ್ರತಿ |
| 6 | ರಸ್ತೆ ತೆರಿಗೆ ಪಾವತಿಸಿರುವ ವಿವರ |
| 7 | ಮಾಲೀಕರಿಗೆ ಸಂಬಂಧಿಸಿದಂತೆ ಡ್ರೈವಿಂಗ್ ಲೈಸೆನ್ಸ್<br>ಚಾಲಕರ ದೈಹಿಕ ಸಾಮರ್ಥ್ಯ ಪ್ರಮಾಣ ಪತ್ರ |
| 8 | ಪಾನ್ ಕಾರ್ಡ್ ಮತ್ತು ಆಧಾರ್ ಕಾರ್ಡ್ ಪ್ರತಿಗಳನ್ನು ಲಗತ್ತಿಸತಕ್ಕದ್ದು. |
| 9 | ಮೇಲ್ಕಂಡ ವಿವರಗಳು ಹಾಗೂ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು, ಲಕೋಟೆಯ ಮೇಲೆ ದಪ್ಪ ಅಕ್ಷರದಲ್ಲಿ ಖಾಸಗಿ ವಾಹನ ಚಾಲಕರ/ಮಾಲೀಕರ ಹೊರಗುತ್ತಿಗೆ ಸೇವೆ ಸಲ್ಲಿಸಲು ಅರ್ಜಿ ಎಂದು ನಮೂದಿಸುವುದು |
| 10 | ಅಪೂರ್ಣ ವಿವರಗಳು ಹಾಗೂ ಮೇಲ್ಕಂಡ ದಾಖಲಾತಿಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು |
| 11 | ಅರ್ಜಿಗಳನ್ನು ಖುದ್ದಾಗಿ ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ವಿಭಾಗೀಯ ಸರಕು ಮತ್ತು ಸೇವಾ ತೆರಿಗೆ ಕಛೇರಿ–5, ಬೆಂಗಳೂರು, ಕೊಠಡಿ ಸಂಖ್ಯೆ–504, ಐದನೇ ಮಹಡಿ, ಬಿ ಬ್ಲಾಕ್, ವಾಣಿಜ್ಯ ತೆರಿಗೆ ಕಾರ್ಯಾಲಯ–2, ಕೋರಮಂಗಲ, ಬೆಂಗಳೂರು ಇವರ ಶಾಖೆಯಲ್ಲಿ ಸಲ್ಲಿಸುವುದು. |
| 12 | ಅರ್ಜಿಗಳನ್ನು ಸಲ್ಲಿಸಿರುವುದಕ್ಕೆ ಸ್ವೀಕೃತಿ ಪಡೆಯುವುದು ಹಾಗೂ ಕಾರ್ಯ ನಿರ್ವಹಣೆಯಲ್ಲಿ ಪಾಲಿಸಬೇಕಾದ ನಿಯಮಗಳು/ಷರತ್ತುಗಳ ವಿವರಗಳ ಪಟ್ಟಿ ಅನ್ವಯ ಖಡ್ಡಾಯವಾಗಿ ನಿಯಮಗಳನ್ನು ಅರ್ಹಗೊಳ್ಳುವ ವಾಹನ ಮಾಲೀಕ/ಚಾಲಕರು ಖಡ್ಡಾಯವಾಗಿ ಪಾಲಿಸತಕ್ಕದ್ದು |
| 13 | ಅರ್ಹಗೊಂಡ ಅರ್ಜಿದಾರರ ವಿವರಗಳ ಪಟ್ಟಿಯ ಪ್ರಕಟಣೆ ದಿನಾಂಕ 24–08–2021 |